# ಕರ್ನಾಟಕ ಸರ್ಕಾರ
## ನೋಂದಣಿ ಮತ್ತು ಮುದ್ರಾಂಕ ಇಲಾಖೆ
### ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರ ಕಛೇರಿ
ಕಂದಾಯ ಭವನ, 8ನೇ ಮಹಡಿ, ಕೆ.ಜಿ.ರಸ್ತೆ, ಬೆಂಗಳೂರು-560009

## ಅಧಿಸೂಚನೆ
## ನೇರ ನೇಮಕಾತಿ ಜಾಹಿರಾತು

ಸಂಖ್ಯೆ:ಸಿಬ್ಬಂದಿ-2-176/2015-16 ದಿನಾಂಕ: 07/02/2022

## ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳ ಬ್ಯಾಕ್‌ಲಾಗ್ ಗ್ರೂಪ್-ಡಿ (ಜವಾನರ) ಹುದ್ದೆಯ ನೇರ ನೇಮಕಾತಿ

***

**ವಿಷಯ :** ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಖಾಲಿ ಇರುವ ಗ್ರೂಪ್-ಡಿ (ಜವಾನರ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಬ್ಯಾಕ್‌ಲಾಗ್ ಹುದ್ದೆಯನ್ನು ಭರ್ತಿಮಾಡುವ ಬಗ್ಗೆ.

**ಉಲ್ಲೇಖ :**
1. ಸರ್ಕಾರದ ಆದೇಶ ಸಂಖ್ಯೆ:ಡಿಸಿಎ(ಸಿಎಸ್‌ಸಿ):11/2013 ದಿನಾಂಕ:03/10/2015
2. ಸರ್ಕಾರದ ಆದೇಶ ಸಂಖ್ಯೆ:ಕಂಇ 13 ಮುನೋಸೇ (3) 2016, ದಿನಾಂಕ: 20/06/2016
3. ಕರ್ನಾಟಕ ಸರ್ಕಾರ ಸಚಿವಾಲಯ ವಿಧಾನಸೌಧ ಆದೇಶ ಸಂಖ್ಯೆ:ಸಿಆಸುಇ 2 ಸೆಹಿಮ 2014, ದಿನಾಂಕ:13/10/2017
4. ಸರ್ಕಾರದ ಆದೇಶ ಸಂಖ್ಯೆ:ಸಕಇ 46 ಎಸ್‌ಟಿಸಿ 2013, ದಿನಾಂಕ:20/12/2017
5. ಸರ್ಕಾರದ ಆದೇಶ ಸಂಖ್ಯೆ:ಸಕಇ 46 ಎಸ್‌ಟಿಸಿ 2013, ದಿನಾಂಕ:29/12/2017
6. ಸರ್ಕಾರದ ಆದೇಶ ಸಂಖ್ಯೆ:ಕಂಇ 7 ಮುನೋಸ 2018, ದಿನಾಂಕ:22/01/2018
7. ಸರ್ಕಾರದ ಆದೇಶ ಸಂಖ್ಯೆ:ಸಕಇ 46 ಎಸ್‌ಟಿಸಿ 2013, ದಿನಾಂಕ:31/01/2018
8. ಸರ್ಕಾರದ ಆದೇಶ ಸಂಖ್ಯೆ:ಕಂಇ 7 ಮುನೋಸ 2018, ದಿನಾಂಕ:18/05/2018
9. ಸರ್ಕಾರದ ಆದೇಶ ಸಂಖ್ಯೆ:ಸಿಎಂ/ಉಪ/230/ನಾನಿ/2018, ದಿನಾಂಕ:27/09/2018
10. ಸರ್ಕಾರದ ಆದೇಶ ಸಂಖ್ಯೆ:ಕಂಇ/ಮುನೋಸೇ(3)/10/2019, ದಿನಾಂಕ: 26-08-2019

********

ಬ್ಯಾಕ್‌ಲಾಗ್ ಹುದ್ದೆಗಳಿಗೆ ಕರ್ನಾಟಕ ರಾಜ್ಯದ ನಾಗರೀಕ ಸೇವಾ (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಕಾಯ್ದಿರಿಸಿದ ಹುದ್ದೆಗಳಲ್ಲಿ ಭರ್ತಿಯಾಗದೇ ಖಾಲಿ ಇರುವ ಹುದ್ದೆಗಳಿಗೆ) ವಿಶೇಷ ನೇಮಕಾತಿ ನಿಯಮಾವಳಿಗಳು-2001 ರನ್ವಯ ನೇರ ನೇಮಕಾತಿಗಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅರ್ಹ ಅಭ್ಯರ್ಥಿಗಳಿಂದ ನಿಗಧಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**1. ಅರ್ಜಿ ಸಲ್ಲಿಸುವ ವಿಧಾನ :**

ಅರ್ಜಿ ಮತ್ತು ಅಧಿಸೂಚನೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. (https://igr.karnataka.gov.in) ಅರ್ಜಿಯ ಪ್ರತಿಯನ್ನು ಮುದ್ರಿಸಿಕೊಂಡು ನಿಗಧಿಪಡಿಸಿದ ದಿನಾಂಕದೊಳಗೆ ಅರ್ಜಿಯ ಪ್ರತಿಯೊಂದಿಗೆ ಇಲಾಖೆಯು ನಿಗಧಿಪಡಿಸಿರುವ ಅರ್ಹತೆಯ ಪ್ರಮಾಣ ಪತ್ರವನ್ನು ಲಗತ್ತಿಸಿ, ಇಲಾಖೆಯ ಕೇಂದ್ರ ಕಛೇರಿಯ ವಿಳಾಸಕ್ಕೆ ಅಂಚೆ ಮೂಲಕ ಅರ್ಜಿಯನ್ನು ಸಲ್ಲಿಸತಕ್ಕದ್ದು. ಇದನ್ನು ಹೊರತುಪಡಿಸಿ ಯಾವುದೇ ವಿಧಾನದಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಇರುವುದಿಲ್ಲ. ಒಬ್ಬ ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸಬಾರದು.

**ಸೂಚನೆ :** ಅರ್ಜಿಯನ್ನು ಅಂಚೆಯ ಮೂಲಕ ಸಲ್ಲಿಸಬೇಕಾದ ವಿಳಾಸ : ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರ ಕಛೇರಿ, ಕಂದಾಯ ಭವನ, 8ನೇ ಮಹಡಿ, ಕೆ.ಜಿ.ರಸ್ತೆ, ಬೆಂಗಳೂರು-560009

1.1. ಅರ್ಜಿ ಸಲ್ಲಿಸುವಾಗ ಜನ್ಮ ದಿನಾಂಕ ದೃಢೀಕರಿಸಿರುವ ಪ್ರಮಾಣ ಪತ್ರ, ಶೈಕ್ಷಣಿಕ ಪ್ರಮಾಣ ಪತ್ರ, ಜಾತಿ ದೃಢೀಕರಿಸುವ ಪ್ರಮಾಣ ಪತ್ರ, ಕನ್ನಡ ಮಾಧ್ಯಮದ ಅಭ್ಯರ್ಥಿ ಆಗಿದ್ದಲ್ಲಿ ಕನ್ನಡ ಮಾಧ್ಯಮದ ದೃಢೀಕರಣ ಪತ್ರ, ಆಧಾರ್‌ಕಾರ್ಡ್, ಇತರೆ ದೃಢೀಕರಣ ಪತ್ರವನ್ನು ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು ಮತ್ತು ಅದೇ ಪ್ರಮಾಣ ಪತ್ರವನ್ನು ಎಲ್ಲಾ ಹಂತದಲ್ಲೂ ಪರಿಗಣನೆಗೆ ತೆಗೆದುಕೊಳ್ಳಲಾಗುವುದು. ಇದನ್ನು ಯಾವ ಹಂತದಲ್ಲೂ ಬದಲಾವಣೆ ಮಾಡಲು ಅವಕಾಶ ಇರುವುದಿಲ್ಲ.

1.2. ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ 17.02.2022

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 31.03.2022 5.30pm

2. **ಶುಲ್ಕ (Fee)**

ಯಾವುದೇ ರೀತಿಯ ಶುಲ್ಕವನ್ನು ಅಭ್ಯರ್ಥಿಯು ಪಾವತಿಸಬೇಕಾಗಿರುವುದಿಲ್ಲ.

3. **ಲಿಖಿತ ಪರೀಕ್ಷೆ:**

ಯಾವುದೇ ಲಿಖಿತ ಪರೀಕ್ಷೆ ಇರುವುದಿಲ್ಲ.

4. **ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣ:**

| ಕ್ರಮ ಸಂಖ್ಯೆ | ಹುದ್ದೆಯ ಪದನಾಮ ಮತ್ತು ವೇತನ ಶ್ರೇಣಿ | ಸಮತಳ ಮೀಸಲಾತಿ | |
|---|---|---|---|
| | | ಪರಿಶಿಷ್ಟಜಾತಿ | ಪರಿಶಿಷ್ಟ ಪಂಗಡ |
| 1 | ಜವಾನರು– (17,000 ರಿಂದ 28,950) | 0 | 1 |
| ಒಟ್ಟು | | **0** | **1** |

5. **ಅರ್ಹತೆ ಮತ್ತು ನಿಬಂಧನೆಗಳು :**

**5.1 ವಿದ್ಯಾರ್ಹತೆ:** ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕದೊಳಗೆ ಈ ಕೆಳಕಂಡಂತೆ ವಿದ್ಯಾರ್ಹತೆಯನ್ನು ಅಭ್ಯರ್ಥಿಯು ಹೊಂದಿರಬೇಕು.

| | |
|---|---|
| ಗ್ರೂಫ್– ಡಿ (ಜವಾನ) | ಎಸ್.ಎಸ್.ಎಲ್.ಸಿ. ಉತ್ತೀರ್ಣರಾಗಿರಬೇಕು. |

6. **ವಯೋಮಿತಿ:**

ಅರ್ಜಿಯನ್ನು ಅಹ್ವಾನಿಸಿ ಜಾರಿ ಮಾಡಲಾಗಿರುವ ಈ ಅಧಿಸೂಚನೆಯು ಹೊರಡಿಸಿದ ದಿನಾಂಕದವರೆಗೆ ಅಭ್ಯರ್ಥಿಯು ಕನಿಷ್ಟ 18 ವರ್ಷ ವಯಸ್ಸನ್ನು ಪೂರೈಸಿರತಕ್ಕದ್ದು ಮತ್ತು ದಿನಾಂಕ:14.02.2022 ಸಿ.ಎಂ/ಉಪ/230/ನಾನಿ/2018ರ ಪ್ರಕಟಣೆಯಾದ ದಿನಾಂಕದೊಳಗೆ ಗರಿಷ್ಟ 40 ವರ್ಷ ವಯೋಮಿತಿಯನ್ನು ಮೀರಿರಬಾರದು.

7. ಸ್ವೀಕೃತ ಅರ್ಜಿಗಳ ಪರಾಮರ್ಶೆ/ಆಯ್ಕೆ ವಿಧಾನ

**ಕರ್ನಾಟಕ ರಾಜ್ಯ ನಾಗರೀಕ ಸೇವೆ (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಕಾಯ್ದಿರಿಸಿದ ಹುದ್ದೆಗಳಲ್ಲಿ ಭರ್ತಿಯಾಗದೇ ಖಾಲಿ ಇರುವ ಹುದ್ದೆಗಳಿಗೆ) (ವಿಶೇಷ ನೇಮಕಾತಿ) ನಿಯಮಾವಳಿಗಳು 2001**ರನ್ವಯ ಸ್ವೀಕರಿಸಲಾದ ಅಂಚೆ ಅರ್ಜಿಗಳನ್ನು ಕ್ರೂಢೀಕರಿಸಿ, ಭರ್ತಿ ಮಾಡಿರುವ ಮಾಹಿತಿ/ವಿವರಗಳನ್ನು ನಿಯಮಾನುಸಾರ ಪರಿಶೀಲಿಸಿ, ವಿದ್ಯಾ ಅರ್ಹತೆಯಲ್ಲಿ ಗರಿಷ್ಟ ಅಂಕಗಳನ್ನು ಪಡೆದ ಅಭ್ಯರ್ಥಿಗಳನ್ನು ಪರಿಗಣಿಸಿ ಒಂದು ಜ್ಯೇಷ್ಟತಾ ಪಟ್ಟಿಯನ್ನು ಮಾಡಿ ಮತ್ತು 29 ರಿಂದ 40 ವರ್ಷದವರೆಗೆ ವಯೋಮಿತಿವುಳ್ಳ ಅಭ್ಯರ್ಥಿಗಳಿಗೆ ಇನ್ನೊಂದು ಜ್ಯೇಷ್ಟತಾ ಪಟ್ಟಿಯನ್ನು ತಯಾರಿಸಲಾಗುವುದು ಹಾಗೂ 29 ರಿಂದ 40 ವರ್ಷದ ವಯೋಮಿತಿವುಳ್ಳ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು. ಮೂಲ ದಾಖಲೆ/ಪ್ರಮಾಣ ಪತ್ರಗಳ ಪರಿಶೀಲನೆಯ ನಂತರವೇ ಆಯ್ಕೆ ಪಟ್ಟಿಯನ್ನು ಅಂತಿಮಗೊಳಿಸಿ ಪ್ರಕಟಿಸಲಾಗುವುದು. ಅಂತಿಮವಾಗಿ ಆಯ್ಕೆಯಾದ ಅಭ್ಯರ್ಥಿಯನ್ನು ಇಲಾಖೆಯಲ್ಲಿ ಖಾಲಿ ಇರುವ ಕಛೇರಿಗೆ ಕರ್ತವ್ಯ ನಿರ್ವಹಿಸಲು ಸ್ಥಳ ನಿಯುಕ್ತಿಗೊಳಿಸಲಾಗುವುದು.

ವಿಶೇಷ ಸೂಚನೆ :

1. ಆಯ್ಕೆಪಟ್ಟಿಯಲ್ಲಿ ಅಭ್ಯರ್ಥಿಯ ಹೆಸರನ್ನು ಸೇರಿಸಿದ ಮಾತ್ರಕ್ಕೆ ಅಭ್ಯರ್ಥಿಗೆ ನೇಮಕಾತಿಯ ಹಕ್ಕನ್ನು ನೀಡಲಾಗುವುದಿಲ್ಲ.

8. ಮೂಲ ದಾಖಲೆ/ಪ್ರಮಾಣ ಪತ್ರಗಳ ಪರಿಶೀಲನೆ :

ಸಂಕ್ಷಿಪ್ತಗೊಳಿಸಿದ ಪಟ್ಟಿಯಲ್ಲಿರುವ ಅಭ್ಯರ್ಥಿಗಳು ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ಮಾಹಿತಿ/ವಿವರಗಳಿಗೆ ಪೂರಕವಾಗಿ ವಯಸ್ಸು (ಜನ್ಮ ದಿನಾಂಕ ತಿಳಿಸಲು ಎಸ್.ಎಸ್.ಎಲ್.ಸಿ. ಅಂಕಪಟ್ಟಿ/ಶಾಲಾ ದಾಖಲಾತಿ ಪ್ರಮಾಣ ಪತ್ರಗಳು) ಶೈಕ್ಷಣಿಕ ಅರ್ಹತೆ ಮೀಸಲಾತಿ ಇತ್ಯಾದಿ ಬಗ್ಗೆ ಮೂಲದಾಖಲೆ/ಮೂಲಪ್ರಮಾಣ ಪತ್ರ, ಕನ್ನಡ ಮಾಧ್ಯಮ ಸರ್ಟಿಫಿಕೇಟ್ ಮತ್ತು ಇವುಗಳ ಒಂದು ಜೆರಾಕ್ಸ್ ಪ್ರತಿಯನ್ನು ಸೂಚಿತ ದಿನಾಂಕದಂದು ಸಂಬಂಧಿಸಿದ ಅಧಿಕಾರಿಗಳ ಎದುರು ಪರಿಶೀಲನೆಗೆ ಕಡ್ಡಾಯವಾಗಿ ಹಾಜರುಪಡಿಸಬೇಕು, ಸದರಿ ಮೂಲದಾಖಲೆ/ಪ್ರಮಾಣ ಪತ್ರಗಳನ್ನು ಹಾಜರುಪಡಿಸಲು ಯಾವುದೇ ಕಾರಣಕ್ಕೂ ಮತ್ತು ಯಾವುದೇ ಸನ್ನಿವೇಶದಲ್ಲಿಯೂ ಕಾಲವಿಸ್ತರಣೆ ನೀಡಲಾಗುವುದಿಲ್ಲ. ಅಭ್ಯರ್ಥಿಯು ತನ್ನ ಅರ್ಜಿ ನಮೂನೆಯಲ್ಲಿ ನಮೂದಿಸಿರುವ ಮಾಹಿತಿ/ವಿವರಗಳನ್ನು ನಿಯಮಾನುಸಾರ ಪರಿಗಣಿಸಲಾಗುವುದು. ಒಂದುವೇಳೆ ನಮೂದಿಸಿರುವ ಮಾಹಿತಿಗೆ ವ್ಯತಿರಿಕ್ತ ದಾಖಲೆ ಪ್ರಮಾಣ ಪತ್ರಗಳನ್ನು ಸಲ್ಲಿಸಿದ್ದಲ್ಲಿ ಅಂತಹ ದ್ಲಾಖಲೆ/ಪ್ರಮಾಣ ಪತ್ರಗಳನ್ನು ಪರಿಗಣನೆಗೆ ತೆಗೆದುಕೊಂಡು ಬದಲಾವಣೆ ಮಾಡಲಾಗುವುದಿಲ್ಲ. ಮೂಲದಾಖಲೆ/ಪ್ರಮಾಣ ಪತ್ರಗಳನ್ನು ಪರಿಶೀಲನೆಯ ಸಮಯದಲ್ಲಿ ಹಾಜರುಪಡಿಸದ ಅಭ್ಯರ್ಥಿಗಳ ಅಭ್ಯರ್ಥಿತನವನ್ನು ರದ್ದುಪಡಿಸಲಾಗುವುದು ಹಾಗೂ ಅವರನ್ನು ಮುಂದಿನ ಆಯ್ಕೆ ಪ್ರಕ್ರಿಯೆಯಿಂದ ಕೈಬಿಡಲಾಗುವುದು.

8.1 ಅಭ್ಯರ್ಥಿಯು ಅರ್ಜಿಯನ್ನು ಭರ್ತಿ ಮಾಡುವಾಗ ಹುದ್ದೆಗೆ ನಿಗಧಿಪಡಿಸಿರುವ ಶೈಕ್ಷಣಿಕ ವಿದ್ಯಾರ್ಹತೆಯಲ್ಲಿ ಕರ್ನಾಟಕ ಪ್ರೌಢಶಿಕ್ಷಣಾ ಪರೀಕ್ಷಾ ಮಂಡಳಿಯಲ್ಲಿ ತೇರ್ಗಡೆಯಾದ ಅಂಕಪಟ್ಟಿಯನ್ನು ಲಗತ್ತಿಸುವುದು.

8.2 ಅಭ್ಯರ್ಥಿಯು ಅರ್ಜಿ ನಮೂನೆಯಲ್ಲಿ ಮೀಸಲಾತಿ ಕೋರಿರುವ ಯಾವುದೇ ಸೌಲಭ್ಯಗಳಿಗೆ ಸಂಬಂಧಿಸಿದಂತೆ ವಿವರಗಳನ್ನು ಅರ್ಜಿಯಲ್ಲಿ ನೀಡಿರುವ ಸಂಬಂಧಿಸಿದ ಕಾಲಂಗಳಲ್ಲಿ ತಪ್ಪದೇ ನಮೂದಿಸಬೇಕು. ಒಂದುವೇಳೆ ಸದರಿ ವಿವರಗಳನ್ನು ಅರ್ಜಿಯಲ್ಲಿ ನಮೂದಿಸದಿದ್ದರೆ ಅಂತಹ ಅಭ್ಯರ್ಥಿಯು ಮೀಸಲಾತಿ/ಕೋರುವ ಇತರೆ ಸೌಲಭ್ಯಗಳಿಂದ ವಂಚಿತರಾಗುತ್ತಾರೆ.

9. ಪರಿಶಿಷ್ಟ ಪಂಗಡದ ಅಡಿ ಮೀಸಲಾತಿ ಕೋರುವ ಅಭ್ಯರ್ಥಿಗಳು ಸಲ್ಲಿಸಬೇಕಾದ ಮೂಲ ದಾಖಲೆ ಪ್ರಮಾಣ ಪತ್ರಗಳ ವಿವರ ಈ ಕೆಳಕಂಡಂತಿದೆ :

ಪರಿಶಿಷ್ಟ ಪಂಗಡದ ಅಡಿ ಮೀಸಲಾತಿ ಕೋರಿ ಅರ್ಜಿ ಸಲ್ಲಿಸುವವರು, ಜಾತಿ ಪ್ರಮಾಣ ಪತ್ರ ಇತ್ಯಾದಿ ಮೀಸಲಾತಿ ಕುರಿತು ಮೂಲ ಪ್ರಮಾಣ ಪತ್ರಗಳನ್ನು ಸೂಚಿತ ದಿನಾಂಕದಂದು ಸದರಿ ಮೂಲ ದಾಖಲೆ/ಪ್ರಮಾಣ ಪತ್ರಗಳನ್ನು ಆಯ್ಕೆ ಪ್ರಾಧಿಕಾರದ ಎದುರು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು.

| | |
|---|---|
| 9.1 | ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಸಂಬಂಧಪಟ್ಟ ತಹಶೀಲ್ದಾರ ರವರಿಂದ ನೀಡಲಾದ ಜಾತಿ ಪ್ರಮಾಣ ಪತ್ರವನ್ನು ಪಡೆದಿರಬೇಕು. |
| 9.2 | ಪ್ರಸ್ತುತ ಸರ್ಕಾರಿ (ಕೇಂದ್ರ ಸರ್ಕಾರ/ಕರ್ನಾಟಕ ರಾಜ್ಯ ಸರ್ಕಾರ/ಇತರೆ ರಾಜ್ಯಗಳು ಹಾಗೂ ಸಂಸ್ಥೆಗಳಲ್ಲಿ ಅಥವಾ ಪ್ರಾಧಿಕಾರದಲ್ಲಿ) ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು ಸಂಬಂಧಿಸಿದ ನೇಮಕಾತಿ ಪ್ರಾಧಿಕಾರದಿಂದ ಅನುಮತಿ ಪತ್ರವನ್ನು ಪಡೆದಿಟ್ಟುಕೊಂಡಿರಬೇಕು ಹಾಗೂ ಮೂಲ ದಾಖಲೆಗಳ ಪರಿಶೀಲನೆಯ ವೇಳೆ ಅವುಗಳನ್ನು ಹಾಜರುಪಡಿಸತಕ್ಕದ್ದು. |
| 9.3 | ಅವಶ್ಯವೆಂದು ಭಾವಿಸುವ ಇನ್ನಿತರ ಮೂಲ ದಾಖಲೆ/ಪ್ರಮಾಣ ಪತ್ರಗಳು. |

10. ಗಮನಿಸಬೇಕಾದ ಬಹುಮುಖ್ಯ ಅಂಶಗಳು :

| | |
|---|---|
| 10.1 | ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಅರ್ಜಿ ಸಲ್ಲಿಸಬಾರದು. |
| 10.2 | ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿದ ಮಾತ್ರಕ್ಕೆ ಅಭ್ಯರ್ಥಿಯು ಆಯ್ಕೆಗೆ ಅರ್ಹತೆ ಪಡೆಯುವುದಿಲ್ಲ. |
| 10.3 | ಅಭ್ಯರ್ಥಿಗಳು ತಮ್ಮ ಮಾಹಿತಿಗಾಗಿ ಭರ್ತಿ ಮಾಡಿ ಸಲ್ಲಿಸಿದ ಅರ್ಜಿಯ ಒಂದು ಜೆರಾಕ್ಸ್ ಪ್ರತಿಯನ್ನು ತಮ್ಮೊಂದಿಗೆ ತಪ್ಪದೇ ಇಟ್ಟುಕೊಳ್ಳತಕ್ಕದ್ದು. |
| 10.4 | ಅಭ್ಯರ್ಥಿಗಳು ನಿಗಧಿತ ಅರ್ಜಿಯಲ್ಲಿ ನಮೂದಿಸಿರುವ ಮಾಹಿತಿ/ವಿವರಗಳ ಆಧಾರದ ಮೇಲೆ ಅವರ ಅರ್ಹತೆಯನ್ನು ಪರಿಗಣಿಸಿ, ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸುವುದರಿಂದ ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿಮಾಡುವಾಗ ಅಸ್ಪಷ್ಟ/ಅಪೂರ್ಣ/ತಪ್ಪು ಅಥವಾ ಸುಳ್ಳು ಮಾಹಿತಿ ನೀಡಬಾರದು. ಅಥವಾ ಸುಳ್ಳು ಮಾಹಿತಿ ನೀಡಿದ್ದಲ್ಲಿ ಅಭ್ಯರ್ಥಿಗಳೇ ಅದಕ್ಕೆ ನೇರ ಮತ್ತು ಸಂಪೂರ್ಣ ಜವಾಬ್ದಾರರಾಗುತ್ತಾರೆ. ಅಭ್ಯರ್ಥಿಗಳು ನಿಗಧಿತ ಅರ್ಜಿಯಲ್ಲಿ ನೀಡಿರುವ ಮಾಹಿತಿ/ವಿವರಗಳನ್ನು ಯಾವುದೇ ಹಂತದಲ್ಲಿಯೂ ಬದಲಾವಣೆ ಮಾಡಲು ಅವಕಾಶ ನೀಡುವುದಿಲ್ಲ. ಆದ ಪ್ರಯುಕ್ತ ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡುವಾಗ ಈ ಕಛೇರಿಯ ಅಧಿಸೂಚನೆಯಲ್ಲಿ ತಿಳಿಸಿರುವ ಎಲ್ಲಾ ಅಂಶಗಳನ್ನು ಸರಿಯಾಗಿ ಅರ್ಥೈಸಿಕೊಂಡು ಅರ್ಜಿಯನ್ನು ಸರಿಯಾಗಿ ಮತ್ತು ಸಮರ್ಪಕವಾಗಿ ಭರ್ತಿ ಮಾಡತಕ್ಕದ್ದು. |
| 10.5 | ಪ್ರವರ್ಗದ ಮೀಸಲಾತಿಯಲ್ಲಿರುವ ಆಯ್ಕೆ ಬಯಸುವ ಅಭ್ಯರ್ಥಿಗಳು ಅರ್ಜಿಯಲ್ಲಿ ಸಂಬಂಧಿಸಿದ ಪ್ರವರ್ಗದ ಕಾಲಂ ಅನ್ನು ಕಡ್ಡಾಯವಾಗಿ ನಮೂದಿಸಬೇಕು. ಈ ಕಾಲಂ ಅನ್ನು ಭರ್ತಿ ಮಾಡದೇ ಖಾಲಿಬಿಟ್ಟಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು. ಯಾವುದೇ ಹಂತದಲ್ಲಿ ಅಭ್ಯರ್ಥಿಯು ತಾನು ಹೊಂದಿರುವ ಪ್ರವರ್ಗದ ಕುರಿತು ಮಾಹಿತಿಯನ್ನು ಹೊಸದಾಗಿ ಸೇರ್ಪಡೆ ಮಾಡಲು ಅಥವಾ ಬದಲಾವಣೆ ಮಾಡಲು ಅವಕಾಶವಿಲ್ಲ. |
| 10.6 | ಅರ್ಜಿಯಲ್ಲಿ ಸರಿಯಾದ ಮಾಹಿತಿ ನೀಡುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ. ಸಂಪೂರ್ಣ ಮಾಹಿತಿ ನೀಡಿದ ಅಥವಾ ತಪ್ಪು ಮಾಹಿತಿ ನೀಡಿದ, ಅಭ್ಯರ್ಥಿ ಸಹಿ ಇಲ್ಲದ ಮತ್ತು ಅಭ್ಯರ್ಥಿಯ ಭಾವಚಿತ್ರ ಅಂಟಿಸದ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಮತ್ತು ತತ್ಸಬಂಧ ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶ ಇರುವುದಿಲ್ಲ. |
| 10.7 | ಅರ್ಜಿಗಳನ್ನು ಸ್ವೀಕರಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕ ಹಾಗೂ ಸಮಯದ ನಂತರ ಸ್ವೀಕೃತವಾದ ಅರ್ಜಿಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ ಹಾಗೂ ಅರ್ಜಿಗಳು ಮೇಲೆ ತಿಳಿಸಿರುವ ವಿಳಾಸಕ್ಕೆ ತಲುಪಲು ವಿಳಂಬವಾದರೆ ಅಥವಾ ಸ್ವೀಕೃತವಾಗದೇ ಇರುವುದಕ್ಕೆ ಆಯ್ಕೆ ಪ್ರಾಧಿಕಾರವು ಜವಾಬ್ದಾರಿಯಲ್ಲ. |
| 10.8 | ಒಬ್ಬನೇ ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚಿನ ಅರ್ಜಿಗಳನ್ನು ಸಲ್ಲಿಸಿದಲ್ಲಿ, ತಾನು ಸಲ್ಲಿಸಿರುವ ಎಲ್ಲಾ ಅರ್ಜಿಗಳಿಗೂ ಒಂದೇ ರೀತಿ ಮಾಹಿತಿಯನ್ನು ನೀಡಿದ್ದಲ್ಲಿ, ಅಭ್ಯರ್ಥಿ ಸಲ್ಲಿಸಿರುವ ಯಾವುದಾದರು ಒಂದು ಅರ್ಜಿಯನ್ನು ಮಾತ್ರ ಪರಿಗಣಿಸಲಾಗುವುದು. ಈ ವಿಷಯದಲ್ಲಿ ಆಯ್ಕೆ ಪ್ರಾಧಿಕಾರ ತೀರ್ಮಾನವೇ ಅಂತಿಮವಾಗಿರುತ್ತದೆ. |
| 10.9 | ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚಿನ ಅರ್ಜಿ ಭರ್ತಿ ಮಾಡಿ ಬೇರೆ ಬೇರೆ ಅರ್ಜಿಗಳಲ್ಲಿ ವಿಭಿನ್ನವಾದ ಮಾಹಿತಿಗಳನ್ನು ನಮೂದಿಸಿದಲ್ಲಿ ಅಂತಹ ಅಭ್ಯರ್ಥಿಯು ಸಲ್ಲಿಸಿದ ಎಲ್ಲಾ ಅರ್ಜಿಗಳನ್ನು ತಿರಸ್ಕರಿಸಲಾಗುವುದು. |
| 10.10 | ಯಾವುದೇ ಅಭ್ಯರ್ಥಿಯು ತನ್ನ ಆಯ್ಕೆಗೆ ಸಂಬಂಧಿಸಿದಂತೆ, ಬಾಹ್ಯ ಒತ್ತಡ ತರಲು ಪ್ರಯತ್ನಿಸಿದಲ್ಲಿ ಅಂತಹ ಅಭ್ಯರ್ಥಿಗಳನ್ನು ಆಯ್ಕೆ ಪ್ರಕ್ರಿಯೆಯಿಂದ ಅನರ್ಹಗೊಳಿಸಲಾಗುವುದು. |
| 10.11 | ಕರ್ನಾಟಕ ರಾಜ್ಯದ ಯಾವುದೇ ಸರ್ಕಾರಿ ಇಲಾಖೆ, ಕೇಂದ್ರ ಸರ್ಕಾರಿ ಇಲಾಖೆ ಅಥವಾ ಅರೆ ಸರ್ಕಾರಿ ಸ್ವಾಮ್ಯದ ಸಂಸ್ಥೆಯ ಸೇವೆಯಿಂದ ವಜಾಗೊಂಡಿರುವ ನೌಕರರು ನೇಮಕಾತಿಗೆ ಅರ್ಹರಲ್ಲ. |
| 10.12 | ಕಾನೂನು ಬಾಹಿರವೆಂದು ಘೋಷಿಸಲಾದ ಸಂಸ್ಥೆ/ಸಂಸ್ಥೆಗಳು ಅಥವಾ ಸಂಘದ/ಸಂಘಗಳ ಸದಸ್ಯರಾಗಿದ್ದರೆ ಅಥವಾ ಇನ್ನಾವುದೇ ರೀತಿಯಲ್ಲಿ ಅಂತಹ ಸಂಸ್ಥೆ/ಸಂಸ್ಥೆಗಳು ಅಥವಾ ಸಂಘ/ಸಂಘಗಳೊಂದಿಗೆ ನಿಕಟ ಸಂಪರ್ಕಹೊಂದಿದ್ದರೆ ಅಂತಹ ವ್ಯಕ್ತಿಗಳು ನೇಮಕಾತಿಗೆ ಅರ್ಹರಾಗುವುದಿಲ್ಲ. |
| 10.13 | ಅಭ್ಯರ್ಥಿಯು ಸಮಾಜಘಾತುಕ ಕೃತ್ಯಗಳಲ್ಲಿ ತೊಡಗಿ ಅಪರಾಧಿ ಆಗಿದ್ದರೆ ಅಂತಹ ವ್ಯಕ್ತಿಗಳು ನೇಮಕಾತಿಗೆ ಅರ್ಹರಾಗುವುದಿಲ್ಲ. |
| 10.14 | ಒಬ್ಬರಿಗಿಂತ ಹೆಚ್ಚು ಜೀವಂತ ಪತ್ನಿಯರನ್ನು/ಪತಿಯರನ್ನು ಹೊಂದಿರುವ ಪುರುಷ/ಮಹಿಳಾ ಅಭ್ಯರ್ಥಿಗಳು ಸರ್ಕಾರದ ಪೂರ್ವಾನುಮತಿ ಇಲ್ಲದೇ ನೇಮಕಾತಿಗೆ ಅರ್ಹರಾಗುವುದಿಲ್ಲ. |

| | |
|---|---|
| | ಸರ್ಕಾರದ ಪೂರ್ವಾನುಮತಿ ಇಲ್ಲದೇ ನೇಮಕಾತಿಗೆ ಅರ್ಹರಾಗುವುದಿಲ್ಲ. |
| 10.15 | ಯಾವುದೇ ಅಭ್ಯರ್ಥಿಯು ಕೇಂದ್ರ ಅಥವಾ ಯಾವುದೇ ರಾಜ್ಯ ಸರ್ಕಾರ/ಸರ್ಕಾರಿ ಸಂಸ್ಥೆಗಳು ನಡೆಸುವ ಯಾವುದೇ ಪರೀಕ್ಷೆಗಳಿಗೆ ಅಥವಾ ಆಯ್ಕೆಗಳಿಗೆ ಹಾಜರಾಗಲು ತಾತ್ಕಾಲಿಕವಾಗಿ ಬಹಿಷ್ಕರಿಸಲ್ಪಟ್ಟಿದ್ದರೆ ಅಥವಾ ಖಾಯಂ ಆಗಿ ಅನರ್ಹಗೊಂಡಿದ್ದರೆ ಅಥವಾ ಬಹಿಷ್ಕರಿಸಲ್ಪಟ್ಟಿದ್ದರೆ ಅಂತಹ ಅಭ್ಯರ್ಥಿಯು ನೇಮಕಾತಿಗೆ ಅರ್ಹರಾಗಿರುವುದಿಲ್ಲ. |
| 10.16 | ಅಭ್ಯರ್ಥಿಯು ತಪ್ಪು ಮಾಹಿತಿಗಳನ್ನು ಅರ್ಜಿಯಲ್ಲಿ ನಮೂದಿಸಿದಲ್ಲಿ ಅಥವಾ ಕೃತ್ರಿಮ ಅಥವಾ ತಿದ್ದಿದ ದಾಖಲಾತಿಗಳನ್ನು ಅಥವಾ ಅಸತ್ಯ ವಿವರಗಳನ್ನು ನೀಡಿದ್ದಲ್ಲಿ ಅಥವಾ ಸತ್ಯ ವಿಷಯಗಳನ್ನು ಮರೆಮಾಚಿದ ಅಥವಾ ಅನುಚಿತ ಮಾರ್ಗಗಳನ್ನು ಉಪಯೋಗಿಸಿದ್ದಲ್ಲಿ ಅಥವಾ ಪ್ರಯತ್ನಿಸಿದಲ್ಲಿ ಈ ನೇಮಕಾತಿಗೆ ಅವರನ್ನು ಅನರ್ಹರೆಂದು ಪರಿಗಣಿಸಲಾಗುವುದು ಮತ್ತು ಕರ್ನಾಟಕ ನಾಗರೀಕ ಸೇವೆಗಳು ಸಾಮಾನ್ಯ ನೇಮಕಾತಿ ನಿಯಮಾವಳಿಗಳು 1977ರ ಉಪನಿಯಮ –20ರಂತೆ ಅಪರಾಧಿ ವ್ಯವಹರಣೆಗೆ ಒಳಪಡುವರು. |
| 10.17 | ಆಯ್ಕೆ ಮತ್ತು ನೇಮಕಾತಿ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ಆಯ್ಕೆಗೆ ಪರಿಗಣಿಸಿರುವ ಅಂಶಗಳ ಬಗ್ಗೆ ವ್ಯತ್ಯಾಸ ಕಂಡುಬಂದಲ್ಲಿ ಅಥವಾ ಆಕ್ಷೇಪಣೆ ಸಲ್ಲಿಕೆಯಾದಲ್ಲಿ ಕೋರ್ಟ್ ತೀರ್ಪುಗಳು ಸರಕಾರದ ನಿರ್ದೇಶನಗಳು ಇಲಾಖೆ ಸುತ್ತೋಲೆಗಳು ಬಂದಲ್ಲಿ ಪ್ರಕಟಿಸಿರುವ ಆಯ್ಕೆ ಪಟ್ಟಿಯಲ್ಲಿ ಸೂಕ್ತ ಬದಲಾವಣೆ ಮಾಡಿ ಆಯ್ಕೆ ಪಟ್ಟಿ ಪರಿಷ್ಕರಿಸುವ ಅಧಿಕಾರವನ್ನು ಆಯ್ಕೆ ಪ್ರಾಧಿಕಾರವು ಹೊಂದಿರುತ್ತದೆ. |
| 10.18 | ಒಂದುವೇಳೆ ಅಧಿಸೂಚನೆಯಲ್ಲಿ ನಮೂದಿಸಿರುವ ಹುದ್ದೆಗಳ ಸಂಖ್ಯೆಯಲ್ಲಿ ಕಡಿತ ಅಥವಾ ಹೆಚ್ಚು ಆದಲ್ಲಿ ಮತ್ತು ಮೀಸಲಾತಿ ವರ್ಗೀಕರಣದಲ್ಲಿ ಏನಾದರು ಬದಲಾವಣೆ ಮಾಡಬೇಕೆಂಬ ಅವಶ್ಯಕತೆ ಕಂಡುಬಂದಲ್ಲಿ ಬದಲಾವಣೆ ಮಾಡಲಾಗುವುದು ಮತ್ತು ಬದಲಾದ ವಿವರಗಳನ್ನು ಆಯ್ಕೆ ಪ್ರಾಧಿಕಾರದ ಪ್ರಕಟಿಸಲಾಗುವುದು. |

**ಸೂಚನೆಗಳು:** 1. ಈ ಮೇಲಿನ ಹುದ್ದೆಗೆ ಆಯ್ಕೆ ಪ್ರಾಧಿಕಾರದ ವೆಬ್‌ಸೈಟ್ <u>www.igr.gov.in</u> ಮೂಲಕ ಅರ್ಜಿಗಳನ್ನು ಪಡೆದುಕೊಳ್ಳುವುದು. ಭರ್ತಿಮಾಡಿದ ಅರ್ಜಿಯೊಂದಿಗೆ ಎಲ್ಲಾ ಲಗತ್ತುಗಳನ್ನು ಸಲ್ಲಿಸುವುದು. ಉದ್ಯೋಗಸ್ಥರಾದ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ತಮ್ಮ ಮೇಲಧಿಕಾರಿಗಳ ಮುಖೇನ ಕಳುಹಿಸಿದರೆ ಮಾತ್ರ ಅರ್ಜಿಗಳನ್ನು ಪರಿಗಣಿಸಲಾಗುವುದು.

2. ಅರ್ಜಿಯು ಈ ಕೆಳಕಂಡಂತೆ ಲಗತ್ತುಗಳನ್ನು ಹೊಂದಿರಬೇಕು.
   ಅ. ಸ್ವಹಸ್ತಾಕ್ಷರವಿರುವ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳನ್ನು ಅರ್ಜಿಗೆ ಲಗತ್ತಿಸಬೇಕು.
   ಆ. ದೃಢೀಕರಿಸಿದ ವರ್ಗಾವಣೆ ಪ್ರಮಾಣ ಪತ್ರ ಅಥವಾ ಅಂಕಪಟ್ಟಿ,
   ಇ. ದೃಢೀಕರಿಸಿದ ಜಾತಿ ಪ್ರಮಾಣ ಪತ್ರ,
   ಈ. ದೃಢೀಕರಿಸಿದ ನಿಗದಿತ ಅರ್ಹತಾ ಪರೀಕ್ಷೆಯ ಅಂಕಪಟ್ಟಿಯ ಪ್ರತಿಗಳು.
   ಉ. ದೃಢೀಕರಿಸಿದ ಅನುಭವ ಪ್ರಮಾಣ ಪತ್ರಗಳ ಪ್ರತಿ.
3. ಅಭ್ಯರ್ಥಿಗಳು ಎಲ್ಲಾ ದಾಖಲಾತಿಗಳ/ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಸೂಚನೆ ನೀಡಿದ ಸಮಯದಲ್ಲಿ ತಪ್ಪದೇ ಹಾಜರುಪಡಿಸಬೇಕು.
4. ಅಭ್ಯರ್ಥಿಯು ಯಾವುದೇ ಇಲಾಖೆ ಅಥವಾ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರೆ ಅಲ್ಲಿನ ಮುಖ್ಯಸ್ಥರ ಮೂಲಕ ಅರ್ಜಿ ಸಲ್ಲಿಸಬೇಕು ಹಾಗೂ ಮುಖ್ಯಸ್ಥರ ನಿರಾಪೇಕ್ಷಣ ಪತ್ರ ಲಗತ್ತಿಸಿರಬೇಕು.
5. ಅರ್ಜಿ ಮತ್ತು ಲಗತ್ತುಗಳು ಹೊಂದಿರುವ ಲಕೋಟೆಯ ಮೇಲೆ ಬ್ಯಾಕ್‌ಲಾಗ್ ಗ್ರೂಪ್–ಡಿ (ಜವಾನರ) ಹುದ್ದೆಗೆ ಅರ್ಜಿ ಎಂದು ದಪ್ಪ ಅಕ್ಷರಗಳಲ್ಲಿ ನಮೂದಿಸಿ, "ನೋಂದಣಿ ಮಹಾ ಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರ ಕಛೇರಿ, 8ನೇ ಮಹಡಿ, ಕಂದಾಯ ಭವನ, ಕೆ.ಜಿ.ರಸ್ತೆ, ಬೆಂಗಳೂರು–560009" ಈ ವಿಳಾಸಕ್ಕೆ ತಲುಪುವಂತೆ ನೋಂದಾಯಿತ ಅಂಚೆ ಮೂಲಕ ಕಳುಹಿಸಬೇಕು.

7.2.22

ಆಯ್ಕೆ ಪ್ರಾಧಿಕಾರ
ನೋಂದಣಿ ಮಹಾಪರಿವೀಕ್ಷಕರು
ಹಾಗೂ ಮುದ್ರಾಂಕಗಳ ಆಯುಕ್ತರು
ಬೆಂಗಳೂರು.

ಕರ್ನಾಟಕ ಸರ್ಕಾರ

# ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು

ಕಂದಾಯಭವನ, 8ನೇ ಮಹಡಿ, ಕೆ.ಜಿ.ರಸ್ತೆ, ಬೆಂಗಳೂರು–560009.

https://igr.karnataka.gov.in

## ಅರ್ಜಿ ನಮೂನೆ

ಇತ್ತೀಚಿನ ಪಾಸ್ ಪೋರ್ಟ್ ಅಳತೆಯ ಭಾವಚಿತ್ರ

ಮಾನ್ಯರೇ,

ನಿಮ್ಮ ಅಧಿಸೂಚನೆ ಕ್ರಮಾಂಕ ______________________ ದಿನಾಂಕ: __________ ಕ್ಕೆ ಅನುಸಾರವಾಗಿ ______________ ಹುದ್ದೆಗೆ ನನ್ನ ಅರ್ಜಿಯನ್ನು ಈ ಕೆಳಗೆ ಕೇಳಿರುವ ಮಾಹಿತಿಯೊಂದಿಗೆ ಸಲ್ಲಿಸುತ್ತಿದ್ದೇನೆ.

ವಿ.ಸೂ. 1) ಈ ನಮೂನೆಯಲ್ಲಿ ಕೇಳಿರುವ ಪ್ರತಿಯೊಂದು ಪ್ರಶ್ನೆಗೂ :

ಎ. ಅಕ್ಷರದಲ್ಲಿ ಉತ್ತರಿಸಬೇಕು.

ಬಿ. ಕೊಟ್ಟಿರುವ ಮಾಹಿತಿಯು ಅಪೂರ್ಣವಿದ್ದಲ್ಲಿ ಅರ್ಜಿಯನ್ನು ತಿರಸ್ಕರಿಸಬಹುದಾಗಿದೆ.

2) ಅಧಿಸೂಚನೆಯಲ್ಲಿ ಕೇಳಿರುವ ಪ್ರಮಾಣ ಪತ್ರಗಳ ಮತ್ತು ಅಂಕಪಟ್ಟಿಗಳ ಪ್ರತಿಯನ್ನು ಅರ್ಜಿಗೆ ಲಗತ್ತಿಸದಿದ್ದಲ್ಲಿ ಅರ್ಜಿಯು ತಿರಸ್ಕರಿಸಲ್ಪಡುವುದು.

| ಕ್ರ. ಸಂ. | ವಿವರ | |
|---|---|---|
| 1. | ಅಭ್ಯರ್ಥಿಯ ಹೆಸರು | |
| 2. | ಅಂಚೆ ವಿಳಾಸ | |
| 3. | ಹುಟ್ಟಿದ ದಿನಾಂಕ:<br>ಊರು/ಪಟ್ಟಣ:<br>ತಾಲ್ಲೂಕು:<br>ಜಿಲ್ಲೆ:<br>ರಾಜ್ಯ: | |
| 4. | ಅ) ಲಿಂಗ:<br>ಆ) ವೈವಾಹಿಕ ಸ್ಥಿತಿ: | |
| 5. | ಅ)ಧರ್ಮ<br>ಆ) ಪ.ಜಾ/ಪ.ಪಂ ಕ್ಕೆ ಸೇರಿದವರೇ? | |
| 6. | ಅ)ಭಾರತೀಯ ಪೌರರೇ?<br>ಆ)ಇಲ್ಲವಾದಲ್ಲಿ ನಿಮ್ಮ ಪೌರತ್ವದ ಪೂರ್ಣ ವಿವರ ಕೊಡಿ | |
| 7. | 1. ಅಂಗವಿಕಲರೇ ?<br>2. ಮಾಜಿ ಸೈನಿಕರೇ ?<br>3. ಸ್ಥಳೀಯ ಅಭ್ಯರ್ಥಿಯೇ ?<br>4. ಅನುಸೂಚಿತ ಜಾತಿಗೆ ಸೇರಿದವರೇ (ಎಸ್‌ಸಿ) ?<br>5. ಅನುಸೂಚಿತ ಪಂಗಡಕ್ಕೆ ಸೇರಿದವರೇ (ಎಸ್‌ಟಿ) ? | |

8. ನಿಮ್ಮ ಶೈಕ್ಷಣಿಕ ಅರ್ಹತೆಯ ಬಗ್ಗೆ ವಿವರ

| ಕ್ರಮ ಸಂಖ್ಯೆ | ಉತ್ತೀರ್ಣವಾಗಿರುವ ಪರೀಕ್ಷೆ | ಯಾವ ವರ್ಷ/ ತಿಂಗಳ ನಲ್ಲಿ ಉತ್ತೀರ್ಣರಾದಿರಿ | ಎಷ್ಟನೇ ಪ್ರಯತ್ನದಲ್ಲಿ ಉತ್ತೀರ್ಣರಾದಿರಿ | ಪಡೆದಿರುವ ಅಂಕಗಳು | ಕನಿಷ್ಠ ನಿಗದಿತ ಅಂಕಗಳು | ಶೇಕಡಾ | ಪಡೆದ ದರ್ಜೆ (ಶ್ರೇಣಿ) |
|---|---|---|---|---|---|---|---|
| 1. | ಎಸ್.ಎಸ್.ಎಲ್.ಸಿ. | | | | | | |

9. ಈ ಹಿಂದೆ ಯಾವುದಾದರು ಸರ್ಕಾರಿ ಕಛೇರಿಯಲ್ಲಿ ಕಾರ್ಯನಿರ್ವಹಿಸಿರುವಿರೇ?

ಅ)ಹೌದು ಆದಲ್ಲಿ ಸಂಬಂಧಿಸಿದ ಮಾಹಿತಿ ಒದಗಿಸುವುದು:

10. ತಂದೆ/ತಾಯಿ ಪೋಷಕರ/ಪತಿಯ ಬಗ್ಗೆ ವಿವರ:

ಅ. ತಂದೆ ಬದುಕಿದ್ದರೆ ಅವರ
1. ಹೆಸರು :
2.ಅಂಚೆ ವಿಳಾಸ:

3. ವೃತ್ತಿ:

ಆ. ತಾಯಿ ಬದುಕಿದ್ದರೆ ಅವರ
1. ಹೆಸರು :
2.ಅಂಚೆ ವಿಳಾಸ:

3. ವೃತ್ತಿ:

ಇ. ತಂದೆ ತಾಯಿ ಇಬ್ಬರೂ ಬದುಕಿಲ್ಲದಿದ್ದಲ್ಲಿ ನಿಮ್ಮ ಪೋಷಕರ ವಿವರ
1. ಹೆಸರು :
2.ಅಂಚೆ ವಿಳಾಸ

3. ವೃತ್ತಿ

ಈ. ಮದುವೆಯಾಗಿದ್ದ ಪಕ್ಷದಲ್ಲಿ ನಿಮ್ಮ ಪತಿಯ/ಪತ್ನಿಯ ಬಗ್ಗೆ ವಿವರ
1. ಹೆಸರು :
2.ಅಂಚೆ ವಿಳಾಸ:

3. ವೃತ್ತಿ:

11. ಈ ಕೆಳಗಿನ ದಾಖಲೆಗಳನ್ನು ನಿಮಗೆ ಅನ್ವಯಿಸುವ ಮಟ್ಟಿಗೆ ಅರ್ಜಿಗೆ ಲಗತ್ತಿಸಬೇಕು. ಅವುಗಳನ್ನು ಲಗತ್ತಿಸಲಾಗಿದೆಯೇ ?

(ಉತ್ತರ : "ಹೌದು" ಅಥವಾ "ಇಲ್ಲ"ಎಂದು ಬರೆಯಬೇಕು)

1. ನೀವು ಇದುವರೆಗೂ ಸರ್ಕಾರಿ ಸೇವೆ ಸಲ್ಲಿಸಿದ್ದರೆ/ ಸಲ್ಲಿಸುತ್ತಿದ್ದರೆ ನಿಮ್ಮ ಮೇಲಾಧಿಕಾರಿಗಳು ನಿಮ್ಮಸೇವಾವಧಿ ಮತ್ತು ಇತರೆ ಮಾಹಿತಿಗಳ ಬಗ್ಗೆ ಪ್ರಪತ್ರ–1 ರಲ್ಲಿ ಕೊಟ್ಟಿರುವ ಪ್ರಮಾಣ ಪತ್ರದ ಪ್ರತಿ ಸಲ್ಲಿಸಿದ್ದಿರಾ ?
2. ಇತ್ತೀಚಿಗೆ ವಿದ್ಯಾಭ್ಯಾಸ ಮಾಡಿದ ಶಾಲೆ/ಕಾಲೇಜು ಮುಖ್ಯಸ್ಥರು ನಿಮ್ಮ ನಡತೆ ಮತ್ತು ಪೂರ್ವೋತ್ತರಗಳ ಬಗ್ಗೆ ಪ್ರಪತ್ರ–2ರಲ್ಲಿ ಇರುವಂತೆ

| | | |
|---|---|---|
| | ನೀಡಿದ ಪ್ರಮಾಣ ಪತ್ರದ ಪ್ರತಿ ಸಲ್ಲಿಸಿದ್ದೀರಾ ?<br><br>3. ವಾಸಿಸುತ್ತಿರುವ ಸ್ಥಳದ ಇಬ್ಬರು ಗಣ್ಯವ್ಯಕ್ತಿಗಳು ನಿಮ್ಮ ನಡತೆ ಮತ್ತು ಪೂರ್ವೋತ್ತರಗಳ ಬಗ್ಗೆ ಪ್ರಪತ್ರ-2ರಲ್ಲಿರುವಂತೆ ನೀಡಿದ ಆರು ತಿಂಗಳಿಗೂ ಹಳೆಯದಲ್ಲದ ಪ್ರಮಾಣ ಪತ್ರದ ಪ್ರತಿ ಸಲ್ಲಿಸಿದ್ದೀರಾ?<br><br>4. 8ನೇ ಕಲಂನಲ್ಲಿ ನೀವು ಕಾಣಿಸಿರುವ ಶೈಕ್ಷಣಿಕ ಅರ್ಹತೆಯ ಬಗ್ಗೆ ಸಂಬಂಧಪಟ್ಟ ಸಂಸ್ಥೆ /ಪ್ರಾಧಿಕಾರಗಳು ನೀಡಿದ ಪ್ರಮಾಣಪತ್ರ ಮತ್ತು ಅಂಕಪಟ್ಟಿಗಳ ಪ್ರತಿಗಳನ್ನು ಲಗತ್ತಿಸಿದ್ದಿರಾ ? | |
| 12. | ಈ ಅರ್ಜಿಗೆ ಲಗತ್ತಿಸಿದ ಎಲ್ಲಾ ದಾಖಲೆಗಳ ಪಟ್ಟಿ : | |
| 13. | 13.1 ನಿಮ್ಮ ವಿರುದ್ಧ ಎಂದಾದರೂ ಕಾನೂನು ಕ್ರಮ ಜರುಗಿಸಲಾಗಿದೆಯೇ ಅಥವಾ ಬಂಧನಕ್ಕೊಳಗಾಗಿರುವಿರೇ? ಅಥವಾ ನ್ಯಾಯಾಲಯದಿಂದ ಬಂಧನಕ್ಕೊಳಗಾಗಿರುವಿರೇ/ದಂಡ ವಿಧಿಸಲ್ಪಟ್ಟಿರುವಿರೇ?<br>'ಹೌದು' ಎಂದಲ್ಲಿ ಸದರಿ ವಿಷಯದ ಬಗ್ಗೆ ಮಾಹಿತಿ ನೀಡುವುದು | |
| | 13.2 ನಿಮ್ಮನ್ನು ಈ ಹಿಂದೆ ಯಾವುದಾದರು ವಿಶ್ವವಿದ್ಯಾಲಯದ ಪಬ್ಲಿಕ್ ಪರೀಕ್ಷೆ ಅಥವಾ ಶಿಕ್ಷಣ ಇಲಾಖೆ ಅಥವಾ ಲೋಕ ಸೇವಾ ಆಯೋಗದಿಂದ ಪರೀಕ್ಷೆ ಬರೆಯುವುದರಿಂದ ಡಿಬಾರ್ ಮಾಡಲಾಗಿದೆಯೇ?<br>'ಹೌದು' ಎಂದಲ್ಲಿ ಸದರಿ ವಿಷಯದ ಬಗ್ಗೆ ಮಾಹಿತಿ ನೀಡುವುದು | |
| | 13.3 ನೀವು ಎಂದಾದರು ಸರ್ಕಾರಿ ಸೇವೆಯಿಂದ ವಜಾಗೊಳಿಸಲ್ಪಟ್ಟಿರುವಿರೇ? ಅಥವಾ ತೆಗೆದು ಹಾಕಲಾಗಿದೆಯೇ?<br>'ಹೌದು' ಎಂದಲ್ಲಿ ಸದರಿ ವಿಷಯದ ಬಗ್ಗೆ ಮಾಹಿತಿ ನೀಡುವುದು | |
| 14. | ಇತರೆ ಯಾವುದೇ ಮಾಹಿತಿ | |

## ಘೋಷಣೆ

ನನಗೆ ತಿಳಿದಿರುವಂತೆ ಮೇಲೆ ಒದಗಿಸಿರುವ ಮಾಹಿತಿಯು ನಿಜವೆಂದು ಮತ್ತು ಸಂಪೂರ್ಣವೆಂದು ಪ್ರಮಾಣಿಕರಿಸುತ್ತೇನೆ. ಸರ್ಕಾರಿ ಉದ್ಯೋಗಕ್ಕೆ ಸೇರಲು ಅನರ್ಹರಾಗುವಂತಹ ಯಾವ ಪೂರ್ವೋತ್ತರಗಳೂ ನನ್ನ ಅರಿವಿಗೆ ಬಂದಿಲ್ಲ. ಒಂದುವೇಳೆ ಮೇಲಿನ ಯಾವುದೇ ಮಾಹಿತಿಯು ತಪ್ಪು ಎಂದು ಕಂಡುಬಂದಲ್ಲಿ ಪ್ರಾಧಿಕಾರವು ನನ್ನ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಬಹುದು ಅಥವಾ ಸೇವೆಯಿಂದ ವಜಾಗೊಳಿಸಬಹುದು.

ಸ್ಥಳ : ಅಭ್ಯರ್ಥಿಯ ಸಹಿ :

ದಿನಾಂಕ:

## ರಾಜ್ಯ ಸರ್ಕಾರಿ/ ಕೇಂದ್ರ ಸರ್ಕಾರಿ ನೌಕರರು ಒದಗಿಸಬೇಕಾದ ಪ್ರಮಾಣ ಪತ್ರ

ಶ್ರೀ/ಶ್ರೀಮತಿ ______________________________ ರವರು

ರಾಜ್ಯ/ಕೇಂದ್ರ ಸರ್ಕಾರದಲ್ಲಿ

______________________________ (ಪದನಾಮ) ______________

______________

______________________________ ಇಲಾಖೆಯಲ್ಲಿ

ಖಾಯಂ/ತಾತ್ಕಲಿಕ ಹುದ್ದೆಯನ್ನು ದಿನಾಂಕ: __________ ರಿಂದ ______________ ರವರೆಗೆ

ಹೊಂದಿರುವರು. ಇವರಿಗೆ ಇಲಾಖೆಯ ಅಧಿಸೂಚನೆ ಸಂಖ್ಯೆ: __________ ದಿನಾಂಕ: __________

__ ರನ್ವಯ ______________________________ ಹುದ್ದೆಗೆ ಅರ್ಜಿ ಸಲ್ಲಿಸಲು

ಅನುಮತಿ ನೀಡಲಾಗಿದೆ.

ಸ್ಥಳ :

ದಿನಾಂಕ:

ನೇಮಕಾತಿ ಪ್ರಾಧಿಕಾರದ ಸಹಿ/

ಇಲಾಖೆಯ ಹೆಸರು ಮತ್ತು ಮೊಹರುನೊಂದಿಗೆ

## ಪ್ರಪತ್ರ-2
## (ನಡತೆ ಪ್ರಮಾಣಪತ್ರ)

ಶ್ರೀ/ಶ್ರೀಮತಿ ______________________________ ರವರ

ಮಗ/ಮಗಳಾದ ಶ್ರೀ/ಶ್ರೀಮತಿ ______________________________ ರವರು

ನನಗೆ ______________ ವರ್ಷ ______________ ತಿಂಗಳುಗಳಿಂದ ಪರಿಚಯವಿದೆ ಎಂದು ಪ್ರಮಾಣೀಕರಿಸುತ್ತೇನೆ. ಮತ್ತು ನನಗೆ ತಿಳಿದಿರುವಂತೆ ಈತ/ಈಕೆ ಒಳ್ಳೆಯ ನಡತೆವುಳ್ಳವರಾಗಿದ್ದಾರೆ ಮತ್ತು ಸರ್ಕಾರಿ ಉದ್ಯೋಗಕ್ಕೆ ಅನರ್ಹರಾಗುವಂತಹ ಯಾವ ಪೂರ್ವೋತ್ತರಗಳೂ ಇಲ್ಲ.

ಶ್ರೀ/ಶ್ರೀಮತಿ ______________________________ ನನ್ನ ಸಂಬಂಧಿಕರಲ್ಲ.

ಸ್ಥಳ :

ದಿನಾಂಕ:

ಸಹಿ :

ಹುದ್ದೆ :

ಕರ್ನಾಟಕ ಸರ್ಕಾರ
ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು
ಕಂದಾಯ ಭವನ, 8ನೇ ಮಹಡಿ, ಕೆ.ಜಿ ರಸ್ತೆ, ಬೆಂಗಳೂರು-560009

ಸಂಖ್ಯೆ:ಸಿಬ್ಬಂದಿ-2/ಸಿಆರ್:176/2015-16

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಗಳ ಆಯುಕ್ತರವರ ಕಛೇರಿ
ಕಂದಾಯ ಭವನ, 8ನೇ ಮಹಡಿ,
ಕೆ.ಜಿ ರಸ್ತೆ, ಬೆಂಗಳೂರು
ದಿನಾಂಕ:07/02/2022

ಇವರಿಗೆ,

ಆಯುಕ್ತರು,
ಕರ್ನಾಟಕ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
ಮಹಾವೀರ್ ಜೈನ್ ರಸ್ತೆ, ಇನ್ಫೆಂಟ್ರಿ ರಸ್ತೆ,
ಬೆಂಗಳೂರು.

ಮಾನ್ಯರೇ,

ವಿಷಯ: ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಖಾಲಿ ಇರುವ ಗ್ರೂಪ್ ಡಿ (ಜವಾನರ) ಬ್ಯಾಕ್‌ಲಾಗ್ ಹುದ್ದೆಯ ಅರ್ಜಿ ಆಹ್ವಾನ ಅಧಿಸೂಚನೆಯನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಸಮ ಸಂಖ್ಯೆ ಅಧಿಸೂಚನೆಯ ದಿನಾಂಕ:07/02/2022

*****

ಪ್ರಸ್ತಾವಿತ ವಿಷಯಕ್ಕೆ ಸಂಬಂಧಿಸಿದಂತೆ, ಈ ಇಲಾಖೆಯ ಖಾಲಿ ಇರುವ ಗ್ರೂಪ್ ಡಿ (ಜವಾನರ) ಬ್ಯಾಕ್‌ಲಾಗ್ ಹುದ್ದೆಯ ಅರ್ಜಿ ಆಹ್ವಾನ ಅಧಿಸೂಚನೆಯನ್ನು ಎಲ್ಲಾ ವಾರ್ತಾ ಪತ್ರಿಕೆಗಳ News Item ನಲ್ಲಿ ಕೂಡಲೇ ಪ್ರಕಟಿಸುವ ವ್ಯವಸ್ಥೆ ಮಾಡುವಂತೆ ತಮ್ಮಲ್ಲಿ ಕೋರಲಾಗಿದೆ. News Item ನಲ್ಲಿ ಪ್ರಕಟಿಸಬೇಕಾದ ಪ್ರಕಟನೆಯನ್ನು ಈ ಪತ್ರಕ್ಕೆ ಲಗತ್ತಿಸಲಾಗಿದೆ.

ತಮ್ಮ ವಿಶ್ವಾಸಿ

7.2.22

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು
ಬೆಂಗಳೂರು

ಕರ್ನಾಟಕ ಸರ್ಕಾರ

ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು

ಕಂದಾಯಭವನ, 8ನೇ ಮಹಡಿ, ಕೆ.ಜಿ.ರಸ್ತೆ, ಬೆಂಗಳೂರು-560009.

https://igr.karnataka.gov.in

ಸಂಖ್ಯೆ:ಸಿಬ್ಬಂದಿ-2/ಸಿಆರ್:176/2015-16 ದಿನಾಂಕ:07/02/2022

## ಪತ್ರಿಕಾ ಪ್ರಕಟಣೆ

ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಖಾಲಿ ಇರುವ ಗ್ರೂಪ್-ಡಿ (ಜವಾನರ) ಬ್ಯಾಕ್‌ಲಾಗ್ ಹುದ್ದೆಯ ನೇರ ನೇಮಕಾತಿಗಾಗಿ ಅರ್ಜಿಯನ್ನು ಅಹ್ವಾನಿಸಲಾಗಿದೆ.

ಈ ಹುದ್ದೆಗೆ ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಅರ್ಜಿಯನಮೂನೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ (https://igr.karnataka.gov.in). ಅರ್ಜಿಯ ನಮೂನೆಯ ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಂಡು ನಿಗಧಿತ ವಿಳಾಸಕ್ಕೆ ಭರ್ತಿ ಮಾಡಿದ ಅರ್ಜಿಯನ್ನು ದಿನಾಂಕ:31/03/2022.ರ ಒಳಗಾಗಿ ಅಂಚೆಯ ಮೂಲಕವೇ ಸಲ್ಲಿಸಬೇಕಾಗುತ್ತದೆ.

**ವಿದ್ಯಾರ್ಹತೆ :** ಎಸ್.ಎಸ್.ಎಲ್.ಸಿ. ಉತ್ತೀರ್ಣರಾಗಿರಬೇಕು.

**ವಯೋಮಿತಿ :** ಅಭ್ಯರ್ಥಿಯ ಹುಟ್ಟಿದ ದಿನಾಂಕದಿಂದ 18 ವರ್ಷಗಳನ್ನು ಪೂರೈಸಿರಬೇಕು ಹಾಗೂ 40 ವರ್ಷಗಳನ್ನು ಮೀರಿರಬಾರದು.

**ಅರ್ಜಿ ಸಲ್ಲಿಸಬೇಕಾದ ಅಂಚೆ ವಿಳಾಸ :**

**ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಅಯುಕ್ತರು**
**ಕಂದಾಯ ಭವನ, 8ನೇ ಮಹಡಿ, ಕೆಂಪೇಗೌಡ ರಸ್ತೆ, ಬೆಂಗಳೂರು-560009**